ಆ) ಹಾಗಿದ್ದಲ್ಲಿ ಶಿಕ್ಷಣದಿಂದ ವಂಚಿತರಾಗಿರುವ ಇಂತಹ ವರ್ಗದವರ ಕೇರಿಗಳಲ್ಲಿ ಗ್ರಂಥಾಲಯ ಪ್ರಾರಂಭಿಸುವುದು ಸೂಕ್ತವಲ್ಲವೇ;

ಇ) ಹಾಗಿದ್ದಲ್ಲಿ ಹಾವೇರಿ ಕ್ಷೇತ್ರದ ಅಗಡಿ ಕನವಳ್ಳಿ, ಹಾವನೂರು, ಗುತ್ತಲ. ಕರ್ಜಗಿ, ಹೊಸರಿತ್ತಿ ಕಡಕೋಳ, ಹತ್ತಿಮತ್ತೂರು, ಯಲವಿಗಿ, ಮಾರುತಿಪುರ, ಈ ಹಳ್ಳಿಗಳಲ್ಲಿ ಅತೀ ಹೆಚ್ಚಯ ಅನುಸೂಚಿತ ಜಾತಿ/ಅನುಸೂಚಿತ ಪಂಗಡ ಜನಸಂಖ್ಯೆ ಇರುವಲ್ಲಿ ಗ್ರಂಥಾಲಯ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ. ಕೆ ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಸಚಿವರು) :

ಅ) ಇಲ್ಲ.

ಆ) ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದ್ದು, ಎಲ್ಲಾ ಸಾರ್ವಜನಿಕರು ಈ ಗ್ರಂಥಾಲಯಗಳ ಉಪಯೋಗ ಪಡೆಯಬಹುದಾಗಿದೆ.

ಇ) ಹಾವೇರಿ ಕ್ಷೇತ್ರದ ಅಗಡಿ, ಕನವಳ್ಳಿ, ಹಾವನೂರು, ಗುತ್ತಲ, ಕರ್ಜಗಿ, ಹೊಸರಿತ್ತಿ, ಕಡಕೋಳ, ಹತ್ತಿಮತ್ತೂರು, ಯಲವಿಗಿ, ಮಾರುತಿಪುರಗಳಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳಿದ್ದು, ಎಲ್ಲರೂ ಇದರ ಉಪಯೋಗ ಪಡೆಯಬಹುದಾದ್ದರಿಂದ ಅತೀ ಹೆಚ್ಚು ಅನುಸೂಚಿತ ಜಾತಿ/ಅನುಸೂಚಿತ ಪಂಗಡ ಜನಸಂಖ್ಯೆ ಇರುವಲ್ಲಿ ಗ್ರಂಥಾಲಯ ತೆರೆಯುವ ಪ್ರಸ್ತಾವನೆ ಸಧ್ಯದಲ್ಲಿ ಇರುವುದಿಲ್ಲ.

1169 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನಾ ಇಲಾಖೆಯನ್ನು ಪುನರ್ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಪುನರ್ ರಚನೆಯ ಪ್ರಸ್ತಾವವು ಎಷ್ಟು ದಿನಗಳಿಂದ ಸರ್ಕಾರದಲ್ಲಿ ಬಾಕಿ ಇರುತ್ತದೆ?

ಇ) ಪುನರ್ ರಚನೆಯ ಮೊದಲನೇ ಹಂತವಾಗಿ ಪಶುಸಂಗೋಪನಾ ಇಲಾಖೆಯಲ್ಲಿ ಆಯುಕ್ತರ ಹಾಗೂ ಅವರ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ ಬಹಳ ವರ್ಷಗಳೇ ಕಳೆದರೂ ಇಲ್ಲಿಯವರೆವಿಗೂ ಸಮಗ್ರ ಪುನರ್ ರಚನೆ ಮಾಡದಿರುವುದಕ್ಕೆ ಕಾರಣಗಳೇನು?

ಈ) ಇಲಾಖಾ ಅಧಿಕಾರಿಗಳ ಉದಾಸೀನತೆಯಿಂದಾಗಿ ಇಲ್ಲಿಯ ವರೆವಿಗೂ ಸಮಗ್ರವಾಗಿ ಪುನರ್ ರಚಿಸದಿರುವುದರಿಂದ ಮೂಲ ಉದ್ದೇಶಕ್ಕೆ ಧಕ್ಕೆ ಬಂದಂತಾಗಿರುವುದು ನಿಜವಲ್ಲವೇ? ಹಾಗಿದ್ದಲ್ಲಿ, ಸದರಿ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಉ) ಪಶುಸಂಗೋಪನಾ ಇಲಾಖೆಯ ಸಮಗ್ರ ಪುನರ್ ರಚನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) – ಇದೆ –

ಆ) ಪುನರ್ ರಚನೆ ಸಂಬಂಧ ಪಶುಸಂಗೋಪನೆ ಇಲಾಖೆಯಿಂದ ಪರಿಪೂರ್ಣ ಪರಿಷ್ಕೃತ ಪ್ರಸ್ತಾವನೆ ಕೋರಲಾಗಿದ್ದು, ಅದನ್ನು ಕಾಯಲಾಗುತ್ತಿದೆ.

ಇ) ಇಲಾಖೆಯಲ್ಲಿ 2004ರಲ್ಲಿ ವಿಭಾಗೀಯ ಮಟ್ಟದ ಕಛೇರಿಗಳು ರದ್ದುಗೊಂಡವು. ತದನಂತರ 2005ರಲ್ಲಿ ಶೇ.80ರಷ್ಟು ಖಾಲಿ ಹುದ್ದೆಗಳನ್ನು ರದ್ದುಗೊಳಿಸುವ ಸಲುವಾಗಿ 825 ಹುದ್ದೆಗಳನ್ನು ಗುರುತಿಸಲಾಗಿದ್ದು, ಈ ಹುದ್ದೆಗಳನ್ನು ನಂತರದ ಬದಲಾವಣೆಯೊಂದಿಗೆ ನೂತನವಾಗಿ ಹಲವು ಸಂಸ್ಥೆಗಳನ್ನು ಸೃಜಿಸಿದೆ. ಈ ರೀತಿ ಬದಲಾವಣೆಯಾಗಿರುವ ಹಿನ್ನೆಲೆಯಲ್ಲಿ ಇಲಾಖಾ ಪುನರ್ ರಚನೆಗೆ ಸಂಬಂಧಿಸಿದಂತೆ ಸಮಗ್ರ ಪ್ರಸ್ತಾವನೆಯನ್ನು ಸಿದ್ದಗೊಳಿಸಬೇಕಾಗಿದೆ.

ಈ) ಇಲಾಖೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಧಕ್ಕೆ ಉಂಟಾಗಿರುವುದಿಲ್ಲ. ಇಲಾಖಾ ಪುನರ್ ರಚನೆಯ ಸವಿಸ್ತಾರ ಪ್ರಸ್ತಾವನೆಯನ್ನು 2004ರಲ್ಲಿ ಸಲ್ಲಿಸಿದ್ದು, ಈ ಬಗ್ಗೆ ವಿವಿಧ ವೃಂದದ ಸಂಘಗಳಿಂದ ಆಕ್ಷೇಪಣೆಗಳು ಬಂದ ಕಾರಣ ಮರು ಪರಿಶೀಲನೆಗಾಗಿ ಇಲಾಖೆ ಪ್ರಸ್ತಾವನೆಯನ್ನು ತಡೆ ಹಿಡಿದಿರುತ್ತದೆ. ಇಲಾಖಾ ಪುನರ್ ರಚನೆಯನ್ನು ಪ್ರಸ್ತುತ ವಿದ್ಯಮಾನಕ್ಕೆ ಅನುಗುಣವಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಇಲಾಖೆ ಮರುಪರಿಶೀಲಿಸುತ್ತಿದ್ದು, ಈ ವಿಳಂಬಕ್ಕೆ ಯಾವುದೇ ಅಧಿಕಾರಿಗಳು ಜವಾಬ್ದಾರರಾಗುವುದಿಲ್ಲ.

ಉ) ಇಲಾಖೆಯಿಂದ ಸವಿಸ್ತಾರವಾದ ಪ್ರಸ್ತಾವನೆಯನ್ನು ಪಡೆದು ಶೀಘ್ರದಲ್ಲೇ ಸಮಗ್ರ ಪುನರ್ ರಚನೆಯನ್ನು ಪೂರ್ಣಗೊಳಿಸಲಾಗುವುದು.

1169 Sri Dinesh Gundurao : Hon'ble Minister for Animal Husbandry kindly answer to the below question?

a) Whether the Government intends to re-organize the Veterinary Department?

b) Since how many days the re-organization proposal is pending with the Government?

c) As a first step towards re-organization the post of Commissioner and Additional Directors were sanctioned? What is the reason for not taking any action to complete Re-organization?

d) Due to negligence of the officers the re-organization is not completed, will it not affect the basic purpose of Re-organization? What is the action taken by the Fovernment against easing officer?

e) When the re-organization will be completed?

Sri Revunaik Belamagi (Minister for Animal Husbadry) :

a) Yes.

b) With regard to Re-organization the complete revised proposal has been called from Department and waiting for the same.

c) During the year 2004 Divisional Officers were abolished. Later on during the year 2005, 825 vacant posts were identified as a part of 80% of the vacant posts which were to be abolished. The posts, which were identified were to be altered and in additional new Institution were created. In view of all these Changes a complete revised Re-organization proposal of the Depertment has to be prepared.

d) Detailed Re-organization proposal was submitted to Government during 2004, but due to the objections raised from different Cadre level Associations, this proposal was held up in the Department for reconsideration. The Department is examining the re-organization proposal without giving much financial burden on the Government. Hence, none of the officers are responsible for delay.

e) As soon as the complete Re-organization proposal is received, action will be taken to Re-organize the Depertment.

658 ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ: ಈ ಕಾಲೇಜುಗಳ ಪೈಕಿ ಎಷ್ಟು ಕಾಲೇಜುಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)